

# ಬಣ್ಣದ ಹರಳಿನ ಕಲೆ ಪಾರ್ಚಂಕಾರಿ

(8ನೇ ಪುಟದಿಂದ)
ಕುಂಚದಿಂದ ಬರೆದ ಚಿತ್ರಗಳಲ್ಲವೇ ಅಲ್ಲ! ಬದಲಾಗಿ ಅವು ವಿವಿಧ ಬಣ್ಣದ ಕಲ್ಲುಗಳನ್ನು ಉಪಯೋಗಿಸಿ ಕೌಶಲದಿಂದ ಮಾಡಿದ ಕುಸರಿ ಕೆಲಸ!

ಈ ಕಲೆಗೆ ಪಾರ್ಚಂಕಾರಿ ಎಂದು ಹೆಸರು. ಈ ಕುಸರಿ ಕೆಲಸದ ಮೊದಲ ಹಂತದಲ್ಲಿ ಅಮೃತಶಿಲೆಗಳ ಮೇಲೆ ಹೂಬಳ್ಳಿಗಳ ಆಕಾರಗಳನ್ನು ಕೊರೆದು, ಅದೇ ಆಕಾರಕ್ಕೆ ಸರಿಯಾಗಿ ಬಣ್ಣದ ಕಲ್ಲುಗಳನ್ನು ಕಡೆದು ಈ ಒಳಲೆಗಳಲ್ಲಿ ಸೇರಿಸಿರುತ್ತಾರೆ. ಇದು ಅತ್ಯಂತ ನಾಜೂಕಿನ ಕೆಲಸವಾಗಿದ್ದು ನುರಿತ ಶಿಲ್ಪಿಗಳಿಂದ ಮಾತ್ರ ಸಾಧ್ಯ. ಎಲೆ ಹಾಗೂ ಬಳ್ಳಿಗಳಿಗೆ ಹಸಿರು, ಹೂಗಳಿಗೆ ಹಳದಿ ಅಥವಾ ಕೆಂಪು– ಹೀಗೆ ಕಲ್ಲುಗಳ ಬಣ್ಣ ವ್ಯತ್ಯಾಸವಾಗದಂತೆ ಕರಾರುವಾಕ್ಕಾಗಿ ಆರಿಸಿ ಕೂರಿಸಬೇಕು. ಅಗಾಧ ಪ್ರಮಾಣದ ಬಣ್ಣದ ಕಲ್ಲುಗಳ ಸಂಗ್ರಹವೂ ಬೇಕು.

ಹಲವು ಶತಮಾನಗಳ ಹಿಂದಿದ್ದ ಈ ಕಲೆ ಇಂದಿಗೂ ಆಗ್ರಾ ಪಟ್ಟಣದಲ್ಲಿ ಜೀವಂತವಾಗಿದೆ ಎಂಬುದು ಒಂದು ಅಚ್ಚರಿಯ ಸಂಗತಿ. ವಿಚಿತ್ರವೆಂದರೆ ತಲೆಮಾರಿನಿಂದ ತಲೆಮಾರಿಗೆ ದಾಟಿದ ಈ ಕಲೆಯನ್ನು ಶಿಲ್ಪಿಗಳು ಇಂದಿನ ಯಾಂತ್ರಿಕ ಯುಗದಲ್ಲೂ ಅಂದಿನ ಕಾಲದ ಪದ್ಧತಿಯನ್ನೇ ಅಳವಡಿಸಿಕೊಂಡು ಉಳಿಸಿ ಬೆಳೆಸಿಕೊಂಡು ಬಂದಿರುವುದು. ಇಲ್ಲಿ ಇದೊಂದು ಕರಕುಶಲ ಗೃಹ ಕೈಗಾರಿಕೆ. ಯಾವ ಹಂತದಲ್ಲೂ ಯಂತ್ರಗಳನ್ನು ಉಪಯೋಗಿಸದೆ ಕೇವಲ ಕರಗಳ ಮೂಲಕವೇ ಅರಳುವ ಈ ಕಲೆ, ಇಂದಿನ ಯಾಂತ್ರೀಕರಣದ ಭರಾಟೆಯಲ್ಲೂ ತನ್ನ ಮೂಲ ತಾಂತ್ರಿಕ ಪದ್ಧತಿಯನ್ನೇ ಅವಲಂಬಿಸಿಕೊಂಡು ಬದುಕಿದೆ. ನಿಜಕ್ಕೂ ಇದೊಂದು ಪವಾಡವೇ!

ಈ ಶಿಲ್ಪಿಗಳ ಮೊದಲ ಆಯ್ಕೆ ವಿವಿಧ ಬಣ್ಣಗಳ ಅಮೃತಶಿಲೆಯ ಚಪ್ಪಟೆ ಯಾಕಾರದ ತೆಳು ಕಲ್ಲುಗಳು. ನಂತರ ನಡೆಯುವುದು ಚಿತ್ತಾರಗಳ ಆಯ್ಕೆ. ಹಾಗೇ ಚಿತ್ತಾರಕ್ಕೆ ತಕ್ಕಂತೆ ಬಣ್ಣದ ಕಲ್ಲುಗಳ ಆಯ್ಕೆ. ಉದಾಹರಣೆಗೆ ಚಿತ್ತಾರ ಹೂಬಳ್ಳಿಯದಾದರೆ, ಬಳ್ಳಿಗೆ ಹಸಿರು ಬಣ್ಣದ ಕಲ್ಲು; ಹೂವಿಗೆ ಹಳದಿ,ಕೆಂಪು ಅಥವಾ ನೀಲಿ ಬಣ್ಣದ ಕಲ್ಲುಗಳ ಆಯ್ಕೆಗೆ ಶಿಲ್ಪಿಗಳು ಮುಂದಾಗುತ್ತಾರೆ.

ಇನ್ನು ತಾವರೆಯ ಪಕಳೆಗಳಿಗಾದರೆ ತಿಳಿಹಳದಿಯ ಕಲ್ಲುಗಳು ಆಯ್ಕೆ ಆಗುತ್ತವೆ. ಒಮ್ಮೆ ಒಂದು ಬಣ್ಣದ ಕಲ್ಲನ್ನು ಒಂದು ಹೂವಿಗೆ ಬಳಸಿದರೆ ಮುಂಬರುವ ಹೂಗಳಿಗೂ ಅದೇ ಬಣ್ಣದ ಕಲ್ಲನ್ನು ಅಳವಡಿಸುವ ಸವಾಲು ಶಿಲ್ಪಿಯ ಮುಂದಿರುತ್ತದೆ. ನಂತರ ಈ ಬಣ್ಣದ ಕಲ್ಲುಗಳನ್ನು ಸಾಣೆ ಹಿಡಿಯುವ ಕೆಲಸ. ಕಲ್ಲನ್ನು ಅಳವಡಿಸಿರುವ ಕೈರಾಟೆಗಳಿಂದ ಸವೆಸುತ್ತಾ ಬರುತ್ತಾರೆ. ಇದು ಅತಿ ನಿಧಾನದ ಮತ್ತು ನಾಜೂಕಿನ ಕ್ರಿಯೆ. ಒಂದು ಸಣ್ಣ ಹೂವನ್ನು ಸೃಷ್ಟಿಸಲು ಒಂದು ವಾರವೇ ಬೇಕಾದೀತು. ಕೆಲ ವಸ್ತುವಿನ ಬಿಡಿ ಭಾಗಗಳು ಕೇವಲ ಒಂದು ಚುಕ್ಕಿಯ ಗಾತ್ರದಿಂದ ಹಿಡಿದು ಕೆಲವು ಅಂಗುಲಗಳವರೆಗೂ ಇರುತ್ತವೆ.



ಬಿಡಿಭಾಗಗಳು ತಯಾರಾದ ಹಾಗೆ ತೆಳು ಹಾಳೆಯ ಮೇಲೆ ಇವುಗಳನ್ನು ತಮ್ಮ ಕಲ್ಪನೆಯ ಚಿತ್ತಾರದ ಆಕಾರದಲ್ಲಿಯೇ ಹೊಂದಿಸುತ್ತಾ ಹೋಗುತ್ತಾರೆ. ಯಾವುದಾದರೂ ದೋಷ ಕಂಡುಬಂದರೆ, ಪುನಃ ರಾಟೆಯಲ್ಲಿ ಆ ಬಿಡಿ ಭಾಗವನ್ನು ತಿದ್ದಿ ತೀಡಿ ಸರಿಪಡಿಸುತ್ತಾರೆ.

ಹೀಗೆ ಸೃಷ್ಟಿಸಿದ ಚಿತ್ತಾರಗಳನ್ನು ಅಮೃತಶಿಲೆಗಳ ಮೇಲೆ ಕೂರಿಸುವುದೇ